ಮುಗಿದ ನಂತರ ಗೊತ್ತಾಗುತ್ತದೆ. ಭಾರತ ಚಿನ್ನದ ಗಣಿಯಲ್ಲಿನ ಪೆಚ್ಚಿದ ವಿವರಗಳು ನಮ್ಮಲ್ಲಿ ಸಧ್ಯ ಲಭ್ಯವಿಲ್ಲ.

3. ರಾಜ್ಯದಲ್ಲಿ ಕೆಲವು ಸ್ಥಳಗಳು ಇವೆ. ಅವುಗಳಲ್ಲಿ ಕೆಲವು ಪ್ರಮುಖ ಸ್ಥಳಗಳನ್ನು ಕೆಳಗೆ ಕೊಡಲಾಗಿದೆ.

1.ಮೆ:ಹಟ್ಟಿಗೋಲ್ಡ್‌ಮೈನ್ಸ್
ಎಂ.ಎಲ್.ನಂ. 2031
ವಂದಲಿ ಗ್ರಾಮ ದೇವದುರ್ಗ
ರಾಯಚೂರು ಜಿಲ್ಲೆ ಕೆಲಸ ಆರಂಭಿಸಿಲ್ಲ.

2.ಮೆ:ಹಟ್ಟಿ ಗೋಲ್ಡ್ ಮೈನ್ಸ್
ಎಂ.ಎಲ್.ನಂ. 2126,
ಊಟಿ ಗ್ರಾಮ, ರಾಯಚೂರು
ಜಿಲ್ಲೆ ದೇವದುರ್ಗತಾ: ಕೆಲಸ ಆರಂಭಿಸಿಲ್ಲ.

3.ಮೆ:ಮೈಸೂರು ಮೈನ್ಸ್ ಗದಗ್ ಗೋಲ್ಡ್ ಫೀಲ್ಡ್,
ಮಹಾಲಿಂಗಪುರ ಶಿರಹಟ್ಟಿ ತಾ:
ಧಾರವಾಡ ಜಿಲ್ಲೆ.

4.ಮೆ:ಸಾಂಗಲಿ ಮೈನ್ಸ್ ಗದಗ್ ಗೋಲ್ಡ್ ಫೀಲ್ಡ್
ಶಿರಹಟ್ಟಿ, ತಾ:ಧಾರವಾಡ ಜಿಲ್ಲೆ.

5.ಮೆ:ಕೆಂಪಿನಕೋಟೆ ಹಾಸನ ಜಿಲ್ಲೆ

6.ಮೆ :ಅಜ್ಜನಹಳ್ಳಿ ಸಿರಾ ತಾಲ್ಲೂಕ್,
ತುಮಕೂರು ಜಿಲ್ಲೆ.

ವಿಷಯ:ರಾಜ್ಯದಲ್ಲಿ ಹಲವಾರು ಆಸ್ಪತ್ರೆಗಳನ್ನು ಮೇಲ್ದರ್ಜೆಗೊಳಿಸಲು ಸರ್ಕಾರವು ವಿಶ್ವ ಬ್ಯಾಂಕಿನಿಂದ ನೆರವು ಪಡೆಯುವ ಬಗ್ಗೆ.

ಚುಕ್ಕೆ ಗುರ್ತಿಲ್ಲದ ಪ್ರಶ್ನೆ ಸಂಖ್ಯೆ 1349 (1860)

ಶ್ರೀ ಬಸವರಾಜ ರಾಯರೆಡ್ಡಿ (ಯಲಬುರ್ಗಾ) :- ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯದಲ್ಲಿ ಹಲವಾರು ಆಸ್ಪತ್ರೆಗಳನ್ನು ಮೇಲ್ದರ್ಜೆಗೊಳಿಸಲು ಸರ್ಕಾರವು ವಿಶ್ವ ಬ್ಯಾಂಕಿನಿಂದ ನೆರವನ್ನೇನಾದರೂ ಪಡೆಯುತ್ತಿದೆಯೇ ?

ಆ) ಹಾಗಿದ್ದಲ್ಲಿ ಗುರ್ತಿಸಲಾದ ಆಸ್ಪತ್ರೆಗಳಾವುವು ?

ಇ) ಈ ಆಸ್ಪತ್ರೆಗಳಿಗೆ ಸೌಕರ್ಯಗಳನ್ನು ಯಾವಾಗ ಒದಗಿಸಲಾಗುವುದು ?

ಶ್ರೀ ಜಿ. ಪುಟ್ಟಸ್ವಾಮಿಗೌಡ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

ಅ) ಈ ವಿಷಯವು ಸರ್ಕಾರದ ಪರಿಶೀಲನೆಯಲ್ಲಿದೆ.

ಆ) ಉದ್ಭವಿಸುವುದಿಲ್ಲ.

ಇ) ಉದ್ಭವಿಸುವುದಿಲ್ಲ.